ಗ್ರಾಮ ಪಂಚಾಯತ್‌ಗಳು ಸರ್ಕಾರಕ್ಕೆ ಪಾವತಿಸಬೇಕಾದ ಕರಗಳ ಬಾಕಿ

885(251) ಶ್ರೀ ವಸಂತ ಬಂಗೇರಾ ಕೆ. (ಬೆಳ್ತಂಗಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್‌ಗಳಲ್ಲಿ 2009–10ರ ಸಾಲಿಗಿಂತ ಹಿಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡಲು ಬಾಕಿ ಇರುವ ಆರೋಗ್ಯಕರ, ವಿದ್ಯಾಕರ ಮತ್ತು ಶಿಕ್ಷಣ ಕರ ಎಷ್ಟು;

ಆ) 2009–10ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡಲು ಬಾಕಿ ಇರುವ ಆರೋಗ್ಯಕರ, ವಿದ್ಯಾಕರ ಮತ್ತು ಶಿಕ್ಷಣಕರ ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್‌ಗಳಲ್ಲಿ 2009–10ನೇ ಸಾಲಿಗಿಂತ ಹಿಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಆರೋಗ್ಯಕರ ರೂ. 79,54,287.00 ಶಿಕ್ಷಣ ಕರ ರೂ. 52,29,100.00 ಮತ್ತು ಗ್ರಂಥಾಲಯ ಕರ ರೂ. 29,89,318.00 ಬಾಕಿ ಇರುತ್ತದೆ.

ಆ) 2009–10ನೇ ಸಾಲಿಗೆ ಸಂಬಂಧಪಟ್ಟಂತೆ ಸರ್ಕಾರದ ಸಂಬಂಧಪಟ್ಟ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ಬಾಕಿ ಇರುವ ಆರೋಗ್ಯ ಕರ ರೂ. 22,44,863 ಶಿಕ್ಷಣ ಕರ ರೂ. 14,93,468.00 ಮತ್ತು ಗ್ರಂಥಾಲಯ ಕರ ರೂ. 8,85,073.00.